ಹೆಚ್ಚುವರಿ ವಿಭಾಗದ ಕುರಿತು.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ವಿಭಾಗಗಳಿಗೆ ಅನುಮತಿ ನೀಡುವ ಬಗ್ಗೆ.

**ಓದಲಾಗಿದೆ :** 1) ದಿನಾಂಕ: 28-10-96ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 155 ಎಸ್‌ಓಹೆಚ್ 95[ಭಾಗ].

2) ದಿನಾಂಕ:01-02-06ರ ಸರ್ಕಾರಿ ಆದೇಶ ಸಂಖ್ಯೆ:ಇಡಿ 19 ಟಿಪಿಯು 04.

**ಪ್ರಸ್ತಾವನೆ:**

01] ಮೇಲೆ ಕ್ರಮ ಸಂಖ್ಯೆ: [1]ರಲ್ಲಿ ಓದಲಾದ ದಿನಾಂಕ: 28-10-1996ರ ಆದೇಶದನ್ವಯ, ರಾಜ್ಯದಲ್ಲಿನ ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿನ ಹೆಚ್ಚುವರಿ ವಿಭಾಗ/ವಿಷಯಗಳಲ್ಲಿನ ಹುದ್ದೆಗಳಿಗೆ ನೇಮಕವಾದವರನ್ನು ಸಂಬಂಧಿಸಿದ ಆಯವ್ಯಯದ ಶೇಕಡಾ 3ರ ಅನುದಾನದ ಅಡಿಯಲ್ಲಿ ವೇತನಾನುದಾನಕ್ಕೆ ಒಳಪಡಿಸಲು ಕೆಲವು ಷರತ್ತಿನೊಂದಿಗೆ ಆಸ್ಪದ ಕಲ್ಪಿಸಲಾಗಿತ್ತು. ಮೇಲೆ ಕ್ರಮ ಸಂಖ್ಯೆ: [2]ರಲ್ಲಿ ಓದಲಾದ ದಿನಾಂಕ: 01-02-2006ರ ಆದೇಶದನ್ವಯ, ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿನ ಹೆಚ್ಚುವರಿ ವಿಭಾಗ/ವಿಷಯಕ್ಕೆ ಶೇಕಡಾ 3ರ ಅನುದಾನದ ಅಡಿಯಲ್ಲಿ ಹೆಚ್ಚುವರಿ ಹುದ್ದೆಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಯೋಜನೆಯನ್ನು ತಕ್ಷಣ ಜಾರಿಗೆ ಬರುವಂತೆ ಹಿಂದಕ್ಕೆ ಪಡೆಯಲಾಗಿದೆ ಮತ್ತು ಮೇಲೆ [1]ರಲ್ಲಿ ಓದಲಾದ ದಿನಾಂಕ: 28-10-1996ರ ಸರ್ಕಾರಿ ಆದೇಶವನ್ನು ಹಿಂದಕ್ಕೆ ಪಡೆದು ರದ್ದುಪಡಿಸಿದೆ. ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ವಿಭಾಗಗಳನ್ನು ತೆರೆಯಲು ಅನುಮತಿ ನೀಡುವ ಬಗ್ಗೆ ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ : ಇಡಿ 113 ಎಸ್‌ಇಎಸ್ 2005
## ಬೆಂಗಳೂರು, ದಿನಾಂಕ : 20ನೇ ಮಾರ್ಚ್ 2006.

02] ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ವಿಭಾಗಗಳನ್ನು ಶಾಶ್ವತ ಅನುದಾನ ರಹಿತ ಆಧಾರದ ಮೇಲೆ, ಸರ್ಕಾರಕ್ಕೆ ಯಾವುದೇ ಹೊರೆ ಬೀಳದಂತೆ, ಪ್ರಾರಂಭಿಸಲು ಅನುಮತಿ ನೀಡಲು ಈ ಕೆಳಕಂಡ ಷರತ್ತಿಗೊಳಪಟ್ಟು ಮಂಜೂರಾತಿಯನ್ನು ನೀಡುವ ಅಧಿಕಾರವನ್ನು ಸಂಬಂಧಪಟ್ಟ ಆಯುಕ್ತಾಲಯಗಳ ನಿರ್ದೇಶಕರಿಗೆ ಈ ಮೂಲಕ ಪ್ರತ್ಯಾಯೋಜಿಸಲಾಗಿದೆ.

## ಷರತ್ತುಗಳು

(1) ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ವಿಭಾಗಗಳಿಗೆ ನಿಗದಿಪಡಿಸಿರುವ ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಕಾಯ್ದಿರಿಸಿಕೊಂಡಿರತಕ್ಕದ್ದು.

(2) ಹೆಚ್ಚುವರಿ ವಿಭಾಗಗಳನ್ನು ತೆರೆಯಲು ಉದ್ದೇಶಿಸಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಮೀಪದಲ್ಲಿರುವ ಶಾಲೆಗಳ ವಿದ್ಯಾರ್ಥಿಗಳ ದಾಖಲಾತಿಗೆ ಯಾವುದೇ ಧಕ್ಕೆಯಾಗದಂತೆ ನೋಡಿಕೊಳ್ಳತಕ್ಕದ್ದು.

(3) ಹೆಚ್ಚುವರಿ ವಿಭಾಗಕ್ಕೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಆಡಳಿತ ಮಂಡಳಿ ಒದಗಿಸುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಯಾವುದೇ ಕಾಲಾವಕಾಶ ನೀಡತಕ್ಕದ್ದಲ್ಲ.

(4) ಸಂಬಂಧಪಟ್ಟ ಆಡಳಿತ ಮಂಡಳಿಗಳು, ಕರ್ನಾಟಕ ಶಿಕ್ಷಣ ಅಧಿನಿಯಮ, 1983 ಹಾಗೂ ನಿಯಮಗಳು, ಉಪಬಂಧಗಳು ಮತ್ತು ಎಲ್ಲಾ ಷರತ್ತುಗಳನ್ನು ಮತ್ತು ನಿಬಂಧನೆಗಳನ್ನು ಪಾಲಿಸತಕ್ಕದ್ದು.

(5) ಅರ್ಹ ವಿದ್ಯಾರ್ಹತೆಯುಳ್ಳ ಶಿಕ್ಷಕರನ್ನು ಮಾತ್ರ ಶಾಶ್ವತ ಅನುದಾನ ರಹಿತ ಷರತ್ತಿನ ಮೇಲೆ ಆಡಳಿತ ಮಂಡಳಿ ನೇಮಿಸಿಕೊಳ್ಳತಕ್ಕದ್ದು.

(6) ಅನುದಾನರಹಿತವಾಗಿ ನೇಮಕವಾಗಲು ಅವರಿಗೆ ಇಲಾಖೆಯಿಂದ ಅನುಮೋದನೆ ನೀಡಬಾರದು.

(7) ಶಾಶ್ವತ ಅನುದಾನ ರಹಿತವಾಗಿ [Permanently without aid] ಮಾತ್ರ ಹೆಚ್ಚುವರಿ ವಿಭಾಗಗಳನ್ನು ತೆರೆಯಲು ಅನುಮತಿ ನೀಡತಕ್ಕದ್ದು. ಮುಂದೆ ಯಾವುದೇ ಅನುದಾನವನ್ನು ಕೋರುವುದಿಲ್ಲವೆಂದು ಆಡಳಿತ ಮಂಡಳಿಯಿಂದ ಮುಚ್ಚಳಿಕೆ ಪತ್ರ ಪಡೆದುಕೊಂಡ ನಂತರವೇ ಶಾಶ್ವತ ಅನುದಾನ ರಹಿತವಾಗಿ ಅನುಮತಿ ನೀಡತಕ್ಕದ್ದು.

03] ಖಾಸಗಿ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ತಾವಾಗಿ ಹೆಚ್ಚುವರಿ ವಿಭಾಗಗಳನ್ನು ತೆರೆಯಬಹುದು. ಇದಕ್ಕೆ ಇಲಾಖೆಯ ಅನುಮತಿ/ಮಂಜೂರಾತಿಗೆ ಪಡೆಯುವ ಅಗತ್ಯವಿರುವುದಿಲ್ಲ. ಮೂಲಭೂತ ಸೌಲಭ್ಯ, ಶಿಕ್ಷಕರು ಇತ್ಯಾದಿ ಅಗತ್ಯತೆಗಳ ಬಗ್ಗೆ ಮಾನ್ಯತೆ ನವೀಕರಣ ಸಮಯದಲ್ಲಿ ಪರಿಶೀಲಿಸಬಹುದು. ಆದ್ದರಿಂದ ಅನುದಾನರಹಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ವಿಭಾಗಗಳನ್ನು ಶಾಶ್ವತ ಅನುದಾನ ರಹಿತ ಆಧಾರದ ಮೇಲೆ ಮಂಜೂರು ಮಾಡುವ ವಾಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿಲ್ಲಿಸತಕ್ಕದ್ದು. ಇನ್ನು ಮುಂದೆ, ಅಂತಹ ಮಂಜೂರಾತಿ ನೀಡುವುದು ಅಗತ್ಯವಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

[ ಸಿದ್ಧಲಿಂಗಯ್ಯ ]
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

ಇವರಿಗೆ :-

1) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
3) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.
4) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹ ನಿರ್ದೇಶಕರಿಗೆ.
5) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪ ನಿರ್ದೇಶಕರಿಗೆ.
6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.